ANUBHAVS



# ಅನಿರುದ್ಧ ನೀನೆ ಎಲ್ಲಾ ಸಂಕಷ್ಟಗಳಿಂದ ಕಾಪಾಡುವವನು

© Copyright 2010, Manasamarthyadata.com

manasamarthyadata.com

*ಶೈಲಾ ನಿಗಮ್ (ನಿರಾಲಾ ನಗರ, ಕಾನ್‌ಪುರ್)*

ನನಗೆ 24-02-2007ರಲ್ಲಿ ಬಾಪೂಜಿಯವರ ಬಗ್ಗೆ ಮಾಹಿತಿ ತಿಳಿದು ಬಹಳ ಆನಂದವಾಯಿತು. ಆದರೂ ನನ್ನ ಮನಸ್ಸು ಬಾಪೂಜಿಯವರ ಚರಣಗಳಲ್ಲಿ ಸ್ಥಿರವಾಗಿರಲು ಆಗುತ್ತಿರಲಿಲ್ಲ. ಬಾಪೂಜಿಯವರ ಕೃಪೆ ಏನೆಂದರೆ, ಮಾಹಿತಿ ತಿಳಿದ 4-5 ದಿನಗಳು ಕಳೆದ ಮೇಲೆ ನಾನು ಮಗನನ್ನು ಶಾಲೆಗೆ ಬಿಟ್ಟು ಮನೆಗೆ ಬರುತ್ತಿದ್ದೆ. ಆಗ ಸೂರ್ಯನು ತನ್ನ ಪೂರ್ಣ ಕಾಂತಿಯಿಂದ ಶೋಭಿಸುತ್ತಿದ್ದನು. ನಾನು ಸೂರ್ಯನ ಕಡೆ ನೋಡಿದಾಗ, ನನಗೆ ಬಾಪೂಜಿಯವರ ಪೂರ್ಣ ಸ್ವರೂಪ ಶೋಭಿಸುತ್ತಾ, ಪದೇ -ಪದೇ ಕಾಣುತ್ತಿತ್ತು. ನನ್ನ ಮನಸ್ಸಿನಲ್ಲಿರುವ ಸಂದೇಹವನ್ನು ದೂರ ಮಾಡಿ ಮನಸ್ಸನ್ನು ಸ್ಥಿರ ಮಾಡುವವಳಿದ್ದೆ. ಸ್ವಲ್ಪ ದಿನದಲ್ಲಿ ಮನಸ್ಸು ಅಸ್ಥಿರವಾಯಿತು. ನಾನು ಬಾಪೂಜಿಯವರಲ್ಲಿ ಅಂತಃಕರಣದಿಂದ ಪ್ರಾರ್ಥನೆ ಮಾಡಿ, ''ಹೇ ಬಾಪೂ, ನನ್ನ ಮನಸ್ಸಿನಲ್ಲಿರುವ ಸಂದೇಹವನ್ನು ದೂರ ಮಾಡಿ ಅದನ್ನು ಸ್ಥಿರ ಮಾಡಿರಿ. ಅಂದರೆ, ನಿಮ್ಮ ಚರಣದಲ್ಲಿ ಸ್ಥಿರ ಮಾಡಿ ಬಿಡಿ ಎಂದು ಬೇಡಿದೆನು. ಬಾಪೂಜಿಯವರ ಕೃಪೆ ಏನೆಂದರೆ, ಅದೇ ರಾತ್ರಿ ನನಗೆ ಕನಸಿನಲ್ಲಿ ಬಂದು ದರ್ಶನ ಕೊಟ್ಟರು. ಬಾಪೂಜಿಯವರು ಒಂದು ಹಳೆಯ ಕಟ್ಟಡದಿಂದ ಸ್ಕೂಟರ್‌ನಲ್ಲಿ ಬರುವುದು ಕಂಡಿತು. ಅವರ ಕೈಯಲ್ಲಿ ನೀರು ತುಂಬಿದ ಕಮಂಡ ಇತ್ತು. ಅವರು ನನ್ನ ಹತ್ತಿರ ಬಂದು ನನ್ನ ಹೆಸರು ಹೇಳಿ ಕರೆದು, ನನ್ನ ಕೈಯಲ್ಲಿ ನೀರು ಹಾಕಿ ನೋಡ ನೋಡುತ್ತಾ ಸ್ಕೂಟರ್‌ನಲ್ಲಿ ಹೋಗಿ ಅದೃಶ್ಯರಾದರು. ನಾನಂತೂ ಬಾಪೂಜಿಯವರಿಂದ ನೀರು ಕುಡಿದು ಧನ್ಯಳಾದೆ. ನನಗೆ ವಿಶ್ವಾಸವೇನೆಂದರೆ ಇದು ಕನಸಲ್ಲ, ನನಸೇ.

ಬಾಪೂಜಿ ನಿಮ್ಮ ಕೃಪೆ ನಮ್ಮ ಮೇಲೆ ಸದಾ ಇರಲಿ ಮತ್ತು ಭವ್ಯವಾದ ಭಯ ನಾಶಕ ಚರಣಗಳ ವಿಸ್ಮೃತಿ ಆಗದಿರಲಿ. ಇದೇ ನನ್ನ ಸಹೃದಯದ ಕಾಮನೆಗಳು.

ANUBHAVS

# HARI OM

© Copyright 2010, Manasamarthyadata.com

manasamarthyadata.com